6. ಚೆನ್ನಯ್ಯ ಕಲಾಮಂದಿರ ಕೋಲಾರ

ಟಿಕೆಟ್ ಮಾರಾಟ ಪ್ರದರ್ಶನಕ್ಕೆ - 2,000.00 ರೂ.

ಟಿಕೆಟ್ ಇಲ್ಲದ ಪ್ರದರ್ಶನಕ್ಕೆ - 1,000.00 ರೂ.

ಈ) ಟಿಕೆಟ್ ಇಲ್ಲದೆ ವಿಧಿಸುವ ಕಾರ್ಯಕ್ರಮಕ್ಕೆ ದಿನ ಒಂದಕ್ಕೆ 1,500.00 ರೂ.

ಟಿಕೆಟ್ ಮಾರಾಟ ಪ್ರದರ್ಶನಕ್ಕೆ ದಿನ ಒಂದಕ್ಕೆ 2,500.00 ರೂ. ಬಾಡಿಗೆ ನಿಗದಿಪಡಿಸಲಾಗಿದೆ. ಬಾಡಿಗೆ ಮೊತ್ತವನ್ನು ರಂಗಮಂದಿರದ ನಿರ್ವಹಣಾ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಹಾಗೂ ರಾಜ್ಯದ ಇತರ ಜಿಲ್ಲೆಗಳಲ್ಲಿ ನಿಗದಿಮಾಡಿರುವ ದರವನ್ನು ಗೊತ್ತು ಪಡಿಸಲಾಗಿದೆ.

ಉ) ಹೌದು. ಅಂತರವಿದೆ. ಆಯಾಯಾ ಜಿಲ್ಲೆಗಳಲ್ಲಿರುವ ರಂಗಮಂದಿರಕ್ಕೆ ಕರೂಪದ ಬಾಡಿಗೆ ವಿಧಿಸುವುದು ಕಷ್ಟ. ಶಿವಮೊಗ್ಗ ಜಿಲ್ಲಾ ರಂಗಮಂದಿರದಲ್ಲಿ ಒಂದು ಪೂರ್ಣದಿನಕ್ಕೆ ಬಾಡಿಗೆ ನಿಗದಿಪಡಿಸಲಾಗಿದೆ.

ಹಾಸನದ ಕೈಗಾರಿಕಾ ವಲಯದ ಬೆಳವಣಿಗೆ ಕೇಂದ್ರದ ಹಣ

53 - ಶ್ರೀ ಬಿ. ಶಿವರಾಂ (ಗಂಡಸಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನದ ಕೈಗಾರಿಕಾ ಬೆಳವಣಿಗೆ ಕೇಂದ್ರಕ್ಕೆ ಗುರುತುಪಡಿಸಲಾದ ಒಟ್ಟು ವಿಸ್ತೀರ್ಣ ಎಷ್ಟು, ಖಾಸಗಿ ಮತ್ತು ಸರ್ಕಾರಿ ಭೂಮಿಯ ವಿಸ್ತೀರ್ಣವೆಷ್ಟು ಮತ್ತು ಭೂಸ್ವಾಧೀನ ವ್ಯವಸ್ಥೆ ಯಾವ ಯಾವ ಹಂತದಲ್ಲಿದೆ?

ಆ) ಇಲ್ಲಿಯವರೆಗೆ ಕೈಗಾರಿಕಾ ಬೆಳವಣಿಗೆ ಕೇಂದ್ರಕ್ಕೆ ಖರ್ಚು ಮಾಡಿರುವ ಹಣವೆಷ್ಟು, ಯಾವ ಯಾವ ವ್ಯವಸ್ಥೆಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದೆ (ವರ್ಷವಾರು ವಿವರ ಒದಗಿಸುವುದು)

ಇ) ಪೂರ್ಣಪ್ರಮಾಣದ ಕೈಗಾರಿಕಾ ಬೆಳವಣಿಗೆ ಕೇಂದ್ರದ ಪ್ರಗತಿಯನ್ನು ಯಾವಾಗ ಪೂರ್ಣಗೊಳಿಸಲು ಸಾಧ್ಯ. ತಗಲುವ ಅಂದಾಜು ವೆಚ್ಚ ಮತ್ತು ಆರ್ಥಿಕ ವ್ಯವಸ್ಥೆಯ ರೀತಿಯನ್ನು ತಿಳಿಸುವುದು.

ಶ್ರೀ ಆರ್.ಡಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಗುರುತುಪಡಿಸಲಾದ ಒಟ್ಟು ಭೂಮಿ 1764-12 ಎಕರೆ. ಖಾಸಗಿ ಜಮೀನು ೧೫೫೩ ಎಕರೆ 29 ಗುಂಟೆ ಸರ್ಕಾರಿ ಜಮೀನು 223 ಎಕರೆ 23 ಗುಂಟೆ. ಈವರೆಗೆ 935 ಎಕರೆ 20 ಗುಂಟೆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ.

ಆ) ಹಾಸನ ಬೆಳವಣಿಗೆ ಕೇಂದ್ರಕ್ಕಾಗಿ 31ನೇ ಜುಲೈ 95ರವರೆಗೆ ರೂ. 571.90 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಖರ್ಚಿನ ವಿವರಗಳು ಈ ಕೆಳಕಂಡಂತಿವೆ:

ಅ)	ಭೂಪರಿಹಾರ	ರೂ.	5,33.73	ಲಕ್ಷಗಳು
ಆ)	ನಿವೇಶನ ಅಭಿವೃದ್ಧಿ	ರೂ.	0.55	"
ಇ)	ನೀರು ಸರಬರಾಜು	ರೂ.	4.01	"
ಈ)	ದೂರ ಸಂಪರ್ಕ	ರೂ.	0.60	"
	ಒಟ್ಟು	ರೂ.	**571.90**	**ಲಕ್ಷಗಳು**

ವರ್ಷವಾರು ಖರ್ಚಿನ ವಿವರಗಳು

1)	1993-94	ರೂ.	392.27	ಲಕ್ಷಗಳು
2)	1994-95	ರೂ.	153.54	"
3)	1995-96 (31.7.95ರವರೆಗೆ)	ರೂ.	26.09	"

ಇ) ಈ ಯೋಜನೆಯನ್ನು ಎರಡು ವರ್ಷದೊಳಗಾಗಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯನ್ನು ಪೂರ್ಣಗೊಳಿಸಲು ತಗಲುವ ಒಟ್ಟು ವೆಚ್ಚ ರೂ. ೫೧.೭೩ ಕೋಟಿಗಳಾಗಿರುತ್ತದೆ. ಪ್ರಸ್ತಾಪಿತ ಹಣಕಾಸಿನ ವ್ಯವಸ್ಥೆ ಈ ಕೆಳಕಂಡಂತಿದೆ

ಅ)	ಕೇಂದ್ರ ಸರ್ಕಾರದ ನೆರವು	ರೂ.	10.00	ಕೋಟಿಗಳು
ಆ)	ರಾಜ್ಯ ಸರ್ಕಾರದ ನೆರವು	ರೂ.	5.00	"
ಇ)	ಮಂಡಳಿಯ ನಿಧಿ (ಅಂತರಿಕ ಸಂಪನ್ಮೂಲ ಪ್ರಾಪ್ತಿಗಳು)	ರೂ.	9.98	"
ಈ)	ಅವಧಿ ಸಾಲ	ರೂ.	26.75	"
	ಒಟ್ಟು	ರೂ.	**51.73**	**ಕೋಟಿಗಳು**

ಭಟ್ಕಳ ನಗರಕ್ಕೆ ನೀರು ಸರಬರಾಜು ಯೋಜನೆ

54 - ಶ್ರೀ ಡಾ॥ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ನಗರಾಭಿವೃದ್ಧಿ ಸಚಿವವು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿನ ಭಟ್ಕಳ ನಗರಕ್ಕೆ ಕುಡಿಯುವ ನೀರನ್ನು ಉಪಯೋಗಿಸಲು ಕಡವಿನಕಟ್ಟೆ ಅಣೆಕಟ್ಟುನಲ್ಲಿ ಸಾಕಷ್ಟು ನೀರು ಲಭ್ಯ ಇದ್ದಾಗಲು, ಕೂಡ ಸಾಕಷ್ಟು ನೀರನ್ನು ಭಟ್ಕಳ ನಗರಕ್ಕೆ ಒದಗಿಸದೆ ಇರುವುದು ನಿಜವೆ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಯಾವುದಾದರೂ ಯೋಜನೆ ರೂಪಿಸಲಾಗಿದೆಯೇ?